





# ಸೀಮಾ ಕಲಾ ಪ್ರಪಂಚ



ಉತ್ತರ ಕನ್ನಡದ ಶಿರಸಿ ಸಾಂಸ್ಕೃತಿಕ ನಗರಿ ಎಂದೇ ಪ್ರಖ್ಯಾತವಾಗಿದೆ. ಇಲ್ಲಿನ ಮನೆ ಮನೆಗಳಲ್ಲಿ ಕಲಾವಿದರಿದ್ದಾರೆ. ಪ್ರತೀ ಮನೆಯ ಹೆಣ್ಣುಮಕ್ಕಳು, ಹೆಂಗಸರು ಒಂದೊಂದು ಪ್ರತಿಭೆ ಹೊಂದಿದ್ದಾರೆ. ಸದಾ ಕ್ರಿಯಾಶೀಲರಾಗಿದ್ದು ಸಾಹಿತ್ಯ, ಸಂಗೀತ, ಕರಕುಶಲ ಕಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಅಂತಹ ಕ್ರಿಯಾಶೀಲರಲ್ಲಿ ಸೀಮಾ ಹೆಗಡೆ ಅಬ್ರಿ ಒಬ್ಬರು.

ಶಿರಸಿಯ ಅಬ್ರಿಮನೆಯವರಾದ ಇವರು ಹುತ್ಗಾರಿನಲ್ಲಿ ನೆಲೆಸಿದ್ದಾರೆ. ಇವರ ಮನೆಯೊಳಗೆ ಕಾಲಿಟ್ಟ ತಕ್ಷಣ ನಾವು ಯಾವುದಾದರೂ ಆರ್ಟ್ ಗ್ಯಾಲರಿಗೋ, ಕರಕುಶಲ ಮ್ಯೂಸಿಯಂಗೋ ಬಂದಿದ್ದೇವೆಯೇ ಎನಿಸುವ ಹಾಗೆ ಮನೆಯ ಗೋಡೆಯ ಮೇಲೆ ಚಿತ್ತಾಕರ್ಷಕ ಪೇಂಟಿಂಗ್, ಬಾಗಿಲಿಗೆ ತೋರಣ, ತರತರದ ವಾಲ್ ಹ್ಯಾಂಗಿಂಗ್‌ಗಳು, ಜೂಮರ್‌ಗಳು ನಮ್ಮನ್ನು ಸೆಳೆಯುತ್ತವೆ.

ಅವರ ಬಳಿ ಇನ್ನಷ್ಟು ಸಂಗ್ರಹಗಳಿವೆ. ನೂರಾರು ವಿಧ ವಿಧದ ಚೆಂದದ ಕರಕುಶಲ ವಸ್ತುಗಳ ಜೊತೆ ಆಲ್ಬಮ್ಮಿನಲ್ಲಿ ಸೆರೆಹಿಡಿದಿಟ್ಟ ಚಿತ್ರಗಳನ್ನು ಮುಂದಿಡುತ್ತಾರೆ ಸೀಮಾ. ಇಂತಹ ಕ್ರಾಫ್ಟ್ ಗಳ ಮೇಲೆ ಅಪಾರ ಆಸಕ್ತಿ ಇರುವ ಸೀಮಾ ಮದುವೆ ಮನೆಗಳಲ್ಲಿ ವಧುವರರಿಗೆ ಆರತಿ ಎತ್ತಲು ಬಳಸುವ ಆರತಿಕಟ್ಟು, ವರನ ಕೈಯಲ್ಲಿ ಹಿಡಿಯುವ ವರಗಾಯಿಯಿಂದ ಹಿಡಿದು, ವಿವಿಧ ಮಾದರಿಯ ಬ್ಯಾಗ್, ಪೇಪರ್ ಹೂವು, ಸೀರೆ ಕುಚ್ಚುಗಳನ್ನು ತಯಾರಿಸುತ್ತಾರೆ. ಆಸಕ್ತಿಗಾಗಿ ಇದನ್ನೆಲ್ಲ ಮಾಡಿ ಕಲಿತ ಸೀಮಾ ಈಗ ಅದೇ ಒಂದು ಉದ್ಯೋಗವಾಗಿ ಅವರ ಕೈ ಹಿಡಿದಿದೆ. ಇದಕ್ಕೆ ಅವರ ಕಲಾಕೌಶಲ್ಯತೆಯೇ ಕಾರಣವಾಗಿದೆ. ಇದು ಸ್ವಾವಲಂಬಿಗೂ ಬದುಕಿಗೆ ಬೆನ್ನುಡಿಯಾಗಿದೆ.

'ನೋಡಿ ಮತ್ತು ತನ್ನದೇ ಆದ ಕಲ್ಪನೆಯಲ್ಲಿ ಹೊಸ ಮಾದರಿಯ ವಸ್ತುಗಳನ್ನು ತಯಾರಿಸುತ್ತೇನೆ. ಏನೇ ಹೊಸತು ಕಣ್ಣಿಗೆ ಬಿದ್ದರೂ ಅದನ್ನು ನಾನೇ ಸ್ವತಃ ಮಾಡಿ ಖುಷಿ ಪಡುತ್ತೇನೆ. ನನ್ನ ಆಸಕ್ತಿ ಮತ್ತು ಖುಷಿಗಾಗಿ ಇದನ್ನೆಲ್ಲ ಮಾಡಿದೆ. ಅದನ್ನು ನೋಡಿದ ಸ್ನೇಹಿತೆಯರು ಬಂಧು ಬಳಗದವರು ತಮಗೂ ಬೇಕೆಂದು ಕೇಳುತ್ತಿದ್ದುದರಿಂದ ಹಲವಷ್ಟು ಮಾಡಿಕೊಡುತ್ತಿದ್ದೇನೆ. ಇದು ಇನ್ನಷ್ಟು ಹೊಸತನ್ನು ರೂಪಿಸಲು ಉತ್ಸಾಹ ಸಿಗುತ್ತಿದೆ' ಎನ್ನುವ ಸೀಮಾ ಬ್ಯೂಟೀಷಿಯನ್ ಕೋರ್ಸ್ ಕೂಡ ಮುಗಿಸಿದ್ದಾರೆ.

ಇವರು ಮಾಡಿರುವ ಜೂಮರ್, ಜೂಲಾ ಥ್ರೆಡ್ ವಾಲ್ ಹ್ಯಾಂಗಿಂಗ್, ಮುತ್ತಿನ ಆರತಿ ಕಟ್ಟು, ಕಮಲ್ ಥ್ರೆಡ್ ವರಗಾಯಿ, ಮಣಿ ಆರತಿ ಕಟ್ಟು, ದಾರದ ಬ್ಯಾಗುಗಳು, ಪೇಪರ್ ಹೂವು, ಸಾರಿ ಕುಚ್ಚು, ಬಳೆಗಳಿಂದ ಮಾಡಿದ ಜೂಮರ್, ಮುತ್ತಿನ ಶಿದ್ದೆ, ಮುತ್ತಿನ ಬೀಸಾಳೆ, ಮಗೆ ಬೀಜದ ಆರತಿ ಕಟ್ಟು, ಧಾನ್ಯಗಳಿಂದ ಮಾಡಿದ ಆರತಿ ಬಟ್ಟಲು, ಬೆಂಕಿ ಕಡ್ಡಿಯಿಂ ಮಾಡಿದ ಆರತಿ ಬಟ್ಟಲು, ಮಣಿ ಮತ್ತು ಉಲ್ಲನ್ ಬಾಗಿಲ ತೋರಣ, ಶಿಂಡಲೆ ಬೀಜದ ಆರತಿ ಕಟ್ಟು, ಗ್ಲುಕೋಸ್ ಬಾಟಲಿಯ ಹೂವು, ಕ್ವಿಲ್ಲಿಂಗ್ ಪೇಪರ್ ವಾಲ್ ಹ್ಯಾಂಗಿಂಗ್, ಪಾಟ್ ಪೇಂಟಿಂಗ್ ಅತಿಹೆಚ್ಚು ಜನಪ್ರಿಯವಾಗಿದ್ದು ಹೆಚ್ಚಿನ ರೀತಿಯಲ್ಲಿ ಮಾರಾಟವೂ ಆಗಿದೆ.

ಇದಿಷ್ಟೇ ಅಲ್ಲದೆ ಇನ್ನೂ ಅನೇಕ ಕರಕುಶಲ ವಸ್ತುಗಳನ್ನು ತಯಾರಿಸುವ ಸೀಮಾ ಅನೇಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗಿಟ್ಟಿಸಿಕೊಂಡಿದ್ದಾರೆ. ಕರಕುಶಲ ಪ್ರದರ್ಶನಗಳನ್ನು ಏರ್ಪಡಿಸಿದ್ದಾರೆ. ಅವರ ಸುತ್ತ ಮುತ್ತಲಿನ ಹಲವಾರು ಸಮಾರಂಭಗಳಲ್ಲಿ ಇವರ ಕರಕುಶಲ ಕೌಶಲ್ಯದ ಅಪರೂಪದ ಕಲಾಕೃತಿಗಳು ಎಲ್ಲರ ಗಮನ ಸೆಳೆಯುತ್ತವೆ. ಸರಳ ವ್ಯಕ್ತಿತ್ವದ ಸದಾ ನಗುಮೊಗದ ಸ್ನೇಹಮಯಿ ಸೀಮಾ 'ನನಗೊಂದು ಆರತಿ ಕಟ್ಟು ಮಾಡಿ ಕೊಡು' ಎಂದು ಕೇಳಿದವರಿಗೆ ಇಲ್ಲ ಎನ್ನದೆ ಪ್ರೀತಿಯಿಂದ ಮಾಡಿಕೊಡುತ್ತಾರೆ. ಮನೆಕೆಲಸಗಳ ಜೊತೆ ಜೊತೆಗೆ ಮಗಳ ಸ್ಕೂಲು ಹೋಮ್ ವರ್ಕ್‌ಗಳ ನಡುವೆ ಹವ್ಯಾಸವಾಗಿ ಕಲೆಯನ್ನು ಉಳಿಸಿಕೊಳ್ಳುತ್ತ ಬೆಳೆಸಿಕೊಳ್ಳಲು ತನ್ನ ಪತಿ ನರಸಿಂಹ ಹೆಗಡೆ ಅಬ್ರಿಯವರ ಪ್ರೋತ್ಸಾಹ ಮತ್ತು ಸಹಕಾರವೂ ಇದೆ ಎನ್ನುತ್ತಾರೆ.

ಇಂತಹ ಅಪರೂಪದ ಕೌಶಲ್ಯ ಹೊಂದಿರುವ ಸೀಮಾ ಇನ್ನಷ್ಟು ಮತ್ತಷ್ಟು ಬೆಳೆಯಲಿ... ಅವರ ಕಲಾ ಪ್ರಪಂಚ ಸೀಮೋಲ್ಲಂಘನ ಮಾಡಲಿ... ಸೀಮಾ ಸಂಪರ್ಕ ಸಂಖ್ಯೆ– 8660715893

**■ ಗಾಯತ್ರೀ ರಾಘವೇಂದ್ರ, ಶಿರಸಿ**

